



## ‘ಗಂಗಾಳ’ವೆಂಬ ಜಲಪಾತ್ರೆ...

ಈ ಚಿತ್ರದಲ್ಲಿ ಕಾಣುತ್ತಿರುವ ಪಾತ್ರೆಯನ್ನು ಬೀದರ್ ಜಿಲ್ಲೆಯಲ್ಲಿ ‘ಗಂಗಾಳ’ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಪಾತ್ರೆ ತಾಮ್ರ ಅಥವಾ ಹಿತ್ತಾಳೆಯಿಂದ ಮಾಡಲಾಗಿದ್ದು, ಇದರ ಎರಡು ಬದಿಯಲ್ಲಿ ಗೋಲಾಕಾರದ ಹಿಡಿಕೆಗಳಿರುತ್ತಿದ್ದವು. ಇದರಿಂದ ಗಂಗಾಳ ಎತ್ತಿ ಇಡುವುದಕ್ಕೆ ಸುಲಭವಾಗುತ್ತಿತ್ತು. ಈ ಪಾತ್ರೆಯನ್ನು ಮುಖ್ಯವಾಗಿ ಸ್ನಾನಕ್ಕಾಗಿ ಮತ್ತು ಬಟ್ಟೆ ಒಗೆಯುವುದಕ್ಕಾಗಿ ಬಳಸುತ್ತಿದ್ದರು. ಹೆಚ್ಚಿನ ಮನೆಗಳಲ್ಲಿ ಇದನ್ನು ಹೊರಗಿನಿಂದ ಬಂದಾಗ ಕಾಲನ್ನು ತೊಳೆದುಕೊಳ್ಳಲು ಬೇಕಾಗುವ ನೀರನ್ನು ತುಂಬಿಡಲು ಬಳಸುತ್ತಿದ್ದರು. ಹಿಂದಿನ ಕಾಲದ ಅನೇಕ ಮನೆಗಳಲ್ಲಿ ತಲೆಬಾಗಿಲನ್ನು ದಾಟಿ ಮನೆಯನ್ನು ಪ್ರವೇಶಿಸಿದ ಕೂಡಲೆ ಎದುರಿಗೆ ಚೌಕಾಕಾರದ ಒಂದು ಬಚ್ಚಲು ಇರುತ್ತಿತ್ತು. ಅಲ್ಲಿ ಈ ಗಂಗಾಳದಲ್ಲಿ ನೀರನ್ನು ತುಂಬಿ ಇಡಲಾಗುತ್ತಿತ್ತು. ಹೊರಗಿನಿಂದ ಬಂದವರು ಅಥವಾ ಪರವೂರಿನಿಂದ ಬಂದವರು ಮೊದಲು ಇಲ್ಲಿ ಕೈಕಾಲು ಮುಖ ತೊಳೆದುಕೊಂಡೇ ಮನೆಯನ್ನು ಪ್ರವೇಶಿಸಬೇಕಾಗುತ್ತಿತ್ತು. ಹೊರಗಿನಿಂದ ಬಂದವರ ಕಾಲಿನ ದೂಳಿನೊಂದಿಗೆ ಯಾವುದೇ ಬಗೆಯ ಬ್ಯಾಕ್ಟೀರಿಯಾಗಳು ಮನೆಯನ್ನು ಪ್ರವೇಶಿಸಬಾರದು ಎಂಬುದೇ ಇದರ ಮುಖ್ಯ ಉದ್ದೇಶವಾಗಿತ್ತು. ಈ ಪದ್ಧತಿಯ ಮಹತ್ವ ನಮಗೆ ಕೊರೊನಾ ಕಾಲದಲ್ಲಿ ಅರಿವಿಗೆ ಬಂತು. ಹಿಂದೆ ಎಲ್ಲರ ಮನೆಗಳಲ್ಲಿ ಕಾಣಸಿಗುತ್ತಿದ್ದ ಈ ಪಾತ್ರೆ ಈಗ ಕೆಲವು ಮನೆಗಳಲ್ಲಿ ಮಾತ್ರ ಉಳಿದುಕೊಂಡಿದ್ದು ಅದು ಬಳಕೆಯಲ್ಲಿ ಇಲ್ಲದೆ ಅಟ್ಟ ಸೇರಿಕೊಂಡಿದೆ.

–ಮುರಲೀಧರ ಕುಲಕರ್ಣಿ, ಬೀದರ್

## ಹಳದಿ ಪುನರ್ಪುಳಿ

ಬೇಸಿಗೆಯಲ್ಲಿ ಕೆಂಬಣ್ಣದ ಪುನರ್ಪುಳಿ ಹಣ್ಣಿನ ಪಾನಕ ದಾಹ ನಿವಾರಕ, ಆರೋಗ್ಯಕರ ಎಂಬ ಭಾವನೆಯಿದೆ. ಅನೇಕರಿಗೆ ಹಳದಿ ವರ್ಣದ ಪುನರ್ಪುಳಿ ಹಣ್ಣಿನ ಬಗೆಗೆ ಗೊತ್ತಿಲ್ಲ. ಕಾಂಬೋಡಿಯಾದ ಕಾಡುಗಳಲ್ಲಿ ಬೆಳೆಯುವ ಈ ಹಣ್ಣು ಈಗ ಭಾರತದಲ್ಲಿ ಕೃಷಿಯಾಗುತ್ತಿದೆ. ಕೆಂಪು ಪುನರ್ಪುಳಿಯ ಎಲ್ಲ ಗುಣಲಕ್ಷಣಗಳೂ ಇರುವ ಇದರ ತಿರುಳಿನಿಂದ ಪಾನಕ ತಯಾರಿಸಬಹುದು. ಹಾಗೆಯೇ ತಿನ್ನಬಹುದು. ಒಣಗಿಸಿಯೂ ಬಳಸಬಹುದು. ಮರದ ಬೇರಿನಿಂದ ಔಷಧೀಯ ಬಳಕೆಗಳಿವೆ. ಈ ಹಣ್ಣು ಭೇದಿ, ಮಲೇರಿಯಾ ಜ್ವರಗಳಿಗೆ ಮದ್ದಾಗುತ್ತದೆ. ಗೇರುಕಟ್ಟೆಯ ಶ್ಯಾಂ ಮಸುಂಧರ ಭಟ್ಟರ ತೋಟದಲ್ಲಿ ಈ ಹಣ್ಣಿನ ಮರವಿದೆ.

–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ






## ಕಸೂತಿ ಕಲೆಯ ತೋರಣ

ಮನೆಯ ಮುಂಬಾಗಿಲು ಅಂದವಾಗಿ ಕಾಣಬೇಕೆಂದರೆ ಅದಕ್ಕೆ ಸುಂದರವಾದ ತೋರಣ ಅತ್ಯವಶ್ಯ. ಕಸೂತಿ ಕಲೆಯುಳ್ಳ ಬಾಗಿಲು ತೋರಣಗಳನ್ನು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದ ಮನೆ ಮನೆಗಳಲ್ಲಿ ಕಾಣಬಹುದು. ತೋರಣಗಳನ್ನು ಹಾಕಿದ ಮನೆಯು ತುಂಬಾ ಆಕರ್ಷಣೆಯಾಗಿ ಕಾಣುತ್ತde. ಈ ಕಸೂತಿ ಕಲೆಯುಳ್ಳ ತೋರಣಗಳನ್ನು ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಶಿರೋಳ ಗ್ರಾಮದ 62 ವರ್ಷದ ಬಸಮ್ಮ ಸುರಕೋಡ ರಚಿಸುವುದರಲ್ಲಿ ತೊಡಗಿದ್ದಾರೆ. ಇವರು ಮೇಟಿ ಬಟ್ಟೆಯ ಮೇಲೆ ನವಿಲು, ಲಕ್ಷ್ಮಿ, ಕೃಷ್ಣ, ಹೂಬಳ್ಳಿ, ಬಸವಣ್ಣ, ಪರಮೇಶ್ವರ ಮುಂತಾದವರ ಚಿತ್ರಗಳನ್ನು ಹೆಣೆಯುವುದರಲ್ಲಿ ಪರಿಣತರು. ಈ ಕಲೆ ಕಣ್ಮರೆಯಾಗಬಾರದೆಂಬ ಕಾಳಜಿ ಹೊಂದಿರುವ ಇವರು, ಸ್ವಂತ ಖರ್ಚಿನಿಂದ ಮೇಟಿ ಬಟ್ಟೆ, ಬಣ್ಣ ಬಣ್ಣದ ದಾರ ತಂದು ಬಿಡುವಿನ ವೇಳೆಯಲ್ಲಿ ತೋರಣಗಳನ್ನು ಹೆಣೆದು ಇತರರಿಗೆ ಹಂಚುತ್ತಿದ್ದಾರೆ.

–ಮಹಾಂತೇಶ ವೀ. ಕೋಳಿವಾಡ, ಹುಬ್ಬಳ್ಳಿ